Yake Bagila Hakiruve Kokilesvari Vani

ಯಾಕೆ ಬಾಗಿಲ ಹಾಕಿರುವೆ ಕೋಕಿಲೇಶ್ವರಿ ವಾಣಿ || ಪ. ||

ಆರು ನಾನರಿಯೆ ನೀ ಸರಿರಾತ್ರಿಯಲಿ ಬಂದೀ || ಅ.ಪ. ||

ನೀರೊಳು ಮುಳುಗಿ ನಿಗಮಚೋರನ ಕೊಂದ ನೀರಜಾಕ್ಷನೆ ಭಾಮೆ ನಾನು
ನಾರುವ ಮೈಯ್ಯ ಎನ್ನೊಳು ತೋರದೆ ಸಾರಿ ದೂರ ನೀ ಪೋಗೋ ರಂಗ ||೧||

ಮಂದರಗಿರಿಯನು ಬೆನ್ನೊಳಗಿಟ್ಟಂತ ಸುಂದರವದನನೇ ಭಾಮೆ ನಾನು
ಇಂದು ನಿನಗೆ ತಕ್ಕ ಭಾರಂಗಳಿಲ್ಲವಯ್ಯ ಸಿಂಧುವಿನೊಳಗೆ ಪೋಗೋ ರಂಗ || ೨ ||

ಧರಣಿಗೆ ಸುಖವನು ನೀಡಿದ ಸೂಕರ ಪರಮಪುರುಷನೇ ಭಾಮೆ ನಾನು
ವರಾಹರೂಪವು ನಿನ್ನ ಘುರುಘುರು ಶಬ್ದವು ಅರಿವೆ ನೀನಿಲ್ಲಿಂದ ಪೋಗೋ ರಂಗ || ೩ ||

ಬಾಲನ ತಾಪವ ಲೀಲೆಯಿಂದರಿತನ ನಾರಸಿಂಹನೆ ಭಾಮೆ ನಾನು
ಮೇಲಿದ್ದ ವಸನವು ಕ್ರೂರ ಕಾರ್ಯಾಂಗಳಲ್ಲ ಕಂಡಂಜುವವಳಲ್ಲ ಪೋಗೋ ರಂಗ ||೪||

ವಾಸವನನುಜನೆ ವಾಮನರೂಪನೆ ನಾಶರಹಿತನೆ ಭಾಮೆ ನಾನು
ಕೂಸಿನ ರೂಪದಿ ಮೋಸ ಮಾಡಿದವಗೆ ದಾಸಿ ಇನ್ನೊಬ್ಬಳು ಏಕೋ ರಂಗ||೫||

ತಾತನ ಮಾತಿಗೆ ಮಾತೆಯ ತರಿದಂತ ಖ್ಯಾತಭಾರ್ಗವನು ನಾನೇ
ಮಾತೆಯ ತರಿದ ಪಾತಕಿ ನಿನಗಿನ್ನು ದೂತಿ ಇನ್ನೊಬ್ಬಳು ಏಕೋ ರಂಗ ||೬||

ದಶರಥನಂದನ ದಶಮುಖ ಭಂಜನ ಪಶುಪತಿವಂದ್ಯನೆ ಭಾಮೆ ನಾನು
ಹಸನಾದ ಏಕಪತ್ನಿವ್ರತದೊಳಿರುವ ನಿನಗೆ ಹೊಸಕನ್ನಿಕೆಯರು ಏಕೋ ರಂಗ ||೭||

ಹದಿನಾರು ಸಾಸಿರ ನೂರೆಂಟು ಸುದತಿಯರ ಬದಿಯಲ್ಲಿದ್ದವನೆ ಭಾಮೆ ನಾನು
ಕದನಕ್ಕೆ ಬೇರಿನ್ನು ಮಾರ್ಗಂಗಳಿಲ್ಲವಯ್ಯ ವದನ ಮುಚ್ಚಿಕೊಂಡು ಪೋಗೋ ರಂಗ ||೮||

ಬೌದ್ಧರ ಕುಲದಲ್ಲಿ ಹುಟ್ಟಿ ದಾನವರ ಮುಗ್ಧರ ಮಾಡಿದೆ ಭಾಮೆ ನಾನು
ಬುದ್ಧ ವಚನಂಗಳು ಎನ್ನಲಿ ಪೇಳಲು ವೃದ್ಧನಾರಿ ನಾನಲ್ಲ ಪೋಗೋ ರಂಗ ||೯||

ವರತುರಗವನೇರಿ ಧರೆಯನು ಚರಿಸಿದ ದೊರೆವೀರ ನೋಡೆ ಭಾಮೆ ನಾನು
ಕುದುರೆಯ ಚಾಕರಿಯೊಳಿರುವವಗೆ ಇನ್ನು ಯುವತಿಯ ಸುಖವಿನ್ನೆಂತೋ ರಂಗ ||೧೦|

ಸರ್ವಪ್ರಾಣಿಗಳನ್ನು ಉದರದಲ್ಲಿಟ್ಟುಕೊಂಡು ಶರಧಿಯೊಳ್ ಮಲಗಿದೆ ಭಾಮೆ ನಾನು
ದೊರೆ ಹಯವದನನ ಚರಣಕೆ ಎರಗುತ ತೆಗೆದಳು ಬಾಗಿಲ ಭಾಮೆ ಆಗ ತೆಗೆದಳು ಬಾಗಿಲ ಭಾಮೆ